## ಕೆಲವು ಸ್ವಾರಸ್ಯಕರ ವಿಷಯಗಳು

೧. ಶ್ರೀ ನಾರಾಯಣಾಚಾರ್ಯಕೃತ "ಶ್ರೀ ರಾಘವೇಂದ್ರ ವಿಜಯ" ಗ್ರಂಥದಲ್ಲಿ ದಾರಿದ್ರ್ಯಾವಸ್ಥೆಯಲ್ಲಿ ಇದ್ದ ವೆಂಕಣ್ಣಭಟ್ಟನ ಮನೆಗೆ ಕಳ್ಳರು ಪ್ರವೇಶಿಸಿ, ಅವರರದಾಗಿ ಉಳಿದಿದ್ದ ಸಮಸ್ತ ವಸ್ತುಗಳನ್ನೂ, ಒಡೆದ ಮಡಿಕೆ, ಕುಡಿಕೆ, ತೂತುಬಿದ್ದ ಹಿತ್ತಾಳೆ ತಾಮ್ರದ ಪಾತ್ರೆಗಳನ್ನೂ ಬಿಡದೆ ಅಪಹರಿಸಿದರೆಂಬ ಸಂಗತಿ ಪ್ರಸ್ತಾಪಿಸಲ್ಪಟ್ಟಿದೆ.

ಛಿನ್ನೇ ವಸ್ತ್ರೇ ಭಿನ್ನ ಪಾನೀಯಪಾತ್ರೇ ಜೀರ್ಣಸ್ಥಲ್ಯಾಂ ದಸ್ಯುಭಿರ್ನೀಯಮಾನೇ
ಪ್ರಾಗಾಕೃಷ್ಟಂ ಭಾವಿಕೌಪೀನಮಸ್ಯ ಚಾಗೇಯಾಗೇ ಪ್ರಾಗಿವಾಭೂತ್ಪ್ರಯಾಜಃ ॥
(ರಾ। ವಿ॥ ಸರ್ಗ ೬ , ಶ್ಲೋಕ ೨೨)

ಈ ಘಟನೆ ನಡೆದದ್ದು ಕಾವೇರಿ ಪಟ್ಟಣದಲ್ಲಿ, ಅವರು ಸಂಸಾರ ಮಾಡುತ್ತಿದ್ದಾಗ ಎಂಬುದಾಗಿ ಕನ್ನಡದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಜೀವನ ಚರಿತ್ರೆಯನ್ನು ಬರೆದಿರುವ ಲೇಖಕರಲ್ಲಿ ಬಹುಪಾಲು ಗ್ರಂಥಕರ್ತರು ತಿಳಿಸಿದ್ದಾರೆ. ಆದರೆ ಈ ಘಟನೆ ನಡೆದುದು ವೆಂಕಣ್ಣಭಟ್ಟನು ಕುಂಭಕೋಣಕ್ಕೆ ಬಂದು ಶ್ರೀ ಸುಧೀಂದ್ರ ತೀರ್ಥರ ಬಳಿ ಪತ್ನೀಸಮೇತ ಆಶ್ರಯ ಪಡೆದ ಕಾಲದಲ್ಲಿ ಎಂಬುದಾಗಿ ಶ್ರೀ ರಾಘವೇಂದ್ರ ವಿಜಯ ಗ್ರಂಥಕರ್ತರು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈ ಒಡೆದ ಪಾತ್ರೆಗಳು, ಹರಿದ ವಸ್ತ್ರಗಳನ್ನು ಚೋರರು ಅಪಹರಿಸಿದಾಗ ಭಾವಿ ಗುರುರಾಜರಿಗೆ ಕೌಪೀನ ಮಾತ್ರ ಉಳಿಯಿತಂತೆ. ಮುಂದೆ ವೆಂಕಣ್ಣ ಭಟ್ಟನ ಸನ್ಯಾಸ ಸ್ವೀಕಾರಕ್ಕೆ ಈ ಸಂಗತಿ ಸಂಕೇತವಾಯಿತೆಂದು ಅವರು ತಿಳಿಸಿರುತ್ತಾರೆ. ಈ ಆಧಾರದ ಮೇಲೆ ಈ ಗ್ರಂಥದಲ್ಲಿ ಈ ಚೌರ್ಯ ಪ್ರಸಂಗವನ್ನು ಕುಂಭಕೋಣದಲ್ಲಿ ವಾಸ್ತವ್ಯದಲ್ಲಿದ್ದಾಗ ನಡೆದಂತೆ ಚಿತ್ರಿಸಲಾಗಿದೆ.

೨. ರಾಘವೇಂದ್ರಸ್ವಾಮಿಗಳ ಯಾತ್ರಾಕ್ರಮವು ಶ್ರೀ ರಾಘವೇಂದ್ರ ವಿಜಯದಲ್ಲಿ ಹೀಗೆ ನಿರೂಪಿತವಾಗಿದೆ :-

ಕುಂಭಕೋಣದಿಂದ ಮನ್ನಾರುಗುಡಿ. ಅಲ್ಲಿ ರಾಜಗೋಪಾಲದೇವರ ದರ್ಶನ ಮತ್ತು ಸ್ತೋತ್ರ. ಅನಂತರ ರಾಮಸೇತು ಯಾತ್ರಾ, ಸಮುದ್ರವರ್ಣನೆ, ಸೇತುಸ್ನಾನ ವರ್ಣನೆ, ವನಶೈಲ ಯಾತ್ರಾ, ಶ್ರೀರಂಗದಿಂದ ಉತ್ತರ ದಿಗ್ಯಾತ್ರಾ, ನಾಮಗಿರಿಯಾತ್ರಾ, ಬಾಣಪುರದಲ್ಲಿ ವಾದಿನಿಗ್ರಹ, ಸುಬ್ರಹ್ಮಣ್ಯ ಕ್ಷೇತ್ರ ಮಹಿಮಾ, ಉಡುಪಿ ಕ್ಷೇತ್ರ ಯಾತ್ರಾ – ಅಲ್ಲಿ ತಾತ್ಪರ್ಯ ಚಂದ್ರಿಕೆಯ ಹತ್ತು ಸಾರಿ ಪ್ರವಚನ, ತಂತ್ರ ದೀಪಿಕಾ ರಚನೆ, ನ್ಯಾಯಮುಕ್ತಾವಲೀ ರಚನೆ, ಚಂದ್ರಿಕಾ ಪ್ರಕಾಶ ನಿರ್ಮಾಣ ಮತ್ತು ಸಮಾಪ್ತಿ – ಪಂಢರಾಪುರ, ಕೊಲ್ಹಾಪುರ,

ರಾಮನಾಥಪುರ, ಗೋದಾವರೀ ಯಾತ್ರಾ, ಕೃಷ್ಣಾ ಸ್ನಾನ, ಶ್ರೀ ಶೈಲ, ಕಾಂಚೀಪುರ, ಅರುಣಾಚಲ, ವೃದ್ಧಾಚಲ, ಶ್ರೀ ಮುಷ್ಣಯಾತ್ರಾ – ಅನಂತರ ಕುಂಭಕೋಣಕ್ಕೆ ಪುನಃ ಪ್ರವೇಶ.

(ರಾ । ವಿ । ಸರ್ಗ ೭–೮)

೩. ವೈಷ್ಣವಾಗ್ರೇಸರನಾದ ಪ್ರಹ್ಲಾದನಿಗೆ ಸಂಹತಾ ಮತ್ತು ಪ್ರಹತಾ ಎಂಬ ಇಬ್ಬರು ಹರಿಭಕ್ತರಾದ ಪರಿಚಾರಕರಿದ್ದರಂತೆ. ತ್ರೇತಾಯುಗದಲ್ಲಿ ಇವರು ವಿಭೀಷಣನಿಗೆ ಸಂಧಿಕ ಮತ್ತು ಪ್ರಸಂಧಿಕರೆಂಬ ಹೆಸರಿನಲ್ಲಿ ಸೇವಕರಾಗಿ ಹುಟ್ಟಿ ಶ್ರೀರಾಮಚಂದ್ರನ ಅನುಗ್ರಹಕ್ಕೆ ಪಾತ್ರರಾದರಂತೆ. ಪ್ರಹ್ಲಾದರಾಜರು ಕಲಿಯುಗದಲ್ಲಿ ವ್ಯಾಸರಾಯರಾಗಿ ಹುಟ್ಟಿ ಮರುಜನ್ಮದಲ್ಲಿ ರಾಘವೇಂದ್ರ ಸ್ವಾಮಿಗಳಾಗಿ ಅವತಾರ ಮಾಡಿದರು. ಸಂಹತ ಮತ್ತು ಪ್ರಹತರು ಅಪ್ಪಣಾಚಾರ್ಯ ಮತ್ತು ಕೃಷ್ಣಾಚಾರ್ಯರೆಂಬ ಬ್ರಾಹ್ಮಣರಾಗಿ ಜನಿಸಿ, ರಾಘವೇಂದ್ರ ಸ್ವಾಮಿಗಳ ಸೇವೆ ಮಾಡಿ, ಅವರ ವಿಶೇಷವಾದ ಅನುಗ್ರಹಕ್ಕೆ ಪಾತ್ರರಾಗಿದ್ದರು – ಎಂಬುದಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಕೃಷ್ಣಾವಧೂತ ಪಂಡಿತರೆಂಬುವರು ಬರೆದ ಶ್ರೀ ರಾಘವೇಂದ್ರ ತಂತ್ರವೆಂಬ ಗ್ರಂಥದಿಂದ ತಿಳಿಯುತ್ತದೆ. ಅಪ್ಪಣ್ಣಾಚಾರ್ಯರು ಶ್ರೀ ರಾಘವೇಂದ್ರ ಸ್ತೋತ್ರ, ರಾಘವೇಂದ್ರ ಕವಚ ಮತ್ತು ರಾಘವೇಂದ್ರ ದಂಡಕ ಹಾಗೂ ಅಷ್ಟೋತ್ತರ ಶತಕ ನಾಮಾವಲಿಯನ್ನು ರಚಿಸಿದ್ದಾರೆ. ಕೃಷ್ಣಾಚಾರ್ಯರು ಸ್ಮೃತಿಮುಕ್ತಾವಳಿ ಎಂಬ ಧರ್ಮಶಾಸ್ತ್ರ ಗ್ರಂಥವನ್ನು ರಚಿಸಿದ್ದಾರೆ.

ಕೃಪೆ : ಕೊರಟಿ ಶ್ರೀನಿವಾಸರಾವ್

ಅವರ

“ ಶ್ರೀ ರಾಘವೇಂದ್ರ ಸ್ವಾಮಿಗಳು” ಪುಸ್ತಕ

Contributed by Smt vidhya Vishnu Kiran www.vijayadasaru,net team member